


ರೂಮ್‌ನಲ್ಲೋ, ಹಾಲ್‌ನಲ್ಲೋ ಇರಬೇಕು. ನನಗೆ ಕಾಲು ಕಟ್ಟಿದ ಹಾಗೆ ಆಗತ್ತೆ. ಊಟವಾದ ಮೇಲೆ ಮನೆಗೆ ಹೋಗ್ತಾಳಾ? ನಾವು ದೇವಸ್ಥಾನಕ್ಕೆ ಹೊರಟರೆ ಅಲ್ಲಿಗೂ ಬರ್ತಾಳೆ. ರಾತ್ರಿಗೂ ಊಟ ಕಟ್ಟಿಕೊಡ್ತೀಯ.

ಸಾರಿ, ನಿಮಗೆ ಇಷ್ಟು ಬೇಜಾರಾಗತ್ತೇಂತ ಗೊತ್ತಿರಲಿಲ್ಲ. ನನಗೂ ನಿನ್ನ ಜೊತೆ, ಮಕ್ಕಳ ಜೊತೆ ಹಬ್ಬದ ದಿನ ಕಾಲ ಕಳೆಯಬೇಕು ಅನ್ನುವ ಆಸೆ ಇರಲ್ವಾ?

ಅವಳು ಮಾತಾಡಲಿಲ್ಲ. 'ನಿನ್ನ ಫ್ರೆಂಡ್‌ಗೆ ಪಿಎಚ್.ಡಿ ಮಾಡಕ್ಕೆ ಹೇಳು. ಅದರಲ್ಲಿ ಮುಳುಗಿ ಹೋದರೆ ಅವರು ಬೇರೆಯವರಿಗೆ ತೊಂದರೆ ಕೊಡಲ್ಲ. ನೀನು ನನ್ನ ಮಾತು ಕೇಳದಿದ್ದರೆ ನಾನು ಹಬ್ಬದ ದಿನ ಮನೆಯಲ್ಲಿ ಇರುವುದಿಲ್ಲ'.

'ಪ್ಲೀಸ್, ಕೋಪ ಮಾಡಿಕೊಳ್ಳಬೇಡಿ. ಇನ್ನು ಮೇಲೆ ನಾನು ಕರೆಯಲ್ಲ. ಈ ಸಲ ಕರೆದು ಬಿಟ್ಟಿದ್ದೀನಿ. ಕ್ಷಮಿಸಿ'. ಅವನು ಮಾತಾಡಲಿಲ್ಲ. ನಂತರ ಶಾಪಿಂಗ್ ಮಾಡಿ ಊಟ ಮಾಡಿಕೊಂಡು ಮನೆಗೆ ಬಂದರು. ಬೃಂದಾ ತನ್ನ ಗೆಳತಿ ಪ್ರತಿಮಾಗೆ ಒಂದು ಶಿಫಾನ್ ಸೀರೆ ತಂದಳು. ಗೌರಿಹಬ್ಬದ ದಿನ ಪೂಜೆ ಮಾಡಿ ಐದು ಮಂದಿಗೆ ಎಲೆ, ಅಡಿಕೆ ಕೊಟ್ಟು ಸರಳವಾದ ಅಡುಗೆ ಮಾಡಿದಳು. ಪ್ರತಿಮಾ ಗೌರಿಹಬ್ಬಕ್ಕೆ ಬರುತ್ತಿರಲಿಲ್ಲ. ಗಣೇಶನ ಹಬ್ಬವನ್ನು ತುಂಬಾ ವಿಜೃಂಭಣೆಯಿಂದ ಮಾಡುತ್ತಿದ್ದರು. ಪುರೋಹಿತರು ಬಂದು ವ್ರತ ಮಾಡಿಸುತ್ತಿದ್ದರು. ಬೃಂದಾ ಆ ದಿನ ಬೇಗ ಸ್ನಾನ ಮಾಡಿ ನೈವೇದ್ಯಕ್ಕೆ ಬೇಕಾದ ಕಡಬು, ಮೋದಕ ತಯಾರಿಸುತ್ತಿದ್ದಳು. ಪೂಜೆ ಮುಗಿಯಿತು. ಮಕ್ಕಳಿಗೆ, ಗಂಡನಿಗೆ ಕಡಬು, ಮೋದಕ, ಕೋಸಂಬರಿ ತಿನ್ನಲು ಕೊಟ್ಟಳು. ಪ್ರತಿಮಾ ಹಬ್ಬಕ್ಕೆ ಬರಲಿಲ್ಲ. ಫೋನೂ ಮಾಡಲಿಲ್ಲ. ಅವಳು ಬೇರೆ ಕಾಲೇಜ್‌ನಲ್ಲಿ ಕೆಲಸ ಮಾಡುತ್ತಿದ್ದಳು. ಬೃಂದಾ ಕೆಲಸ ಮಾಡುತ್ತಿದ್ದುದು ಗೌರ್ನಮೆಂಟ್ ಕಾಲೇಜ್‌ನಲ್ಲಿ.

'ನಿನಗೆ ಬೆಂಗಳೂರಿನಿಂದ ವರ್ಗ ಆಗುವವರೆಗೂ ಕೆಲಸ ಮಾಡು. ಟ್ರಾನ್ಸ್‌ಫರ್ ಆದ್ರೆ ರಜ ಹಾಕು. ಆಮೇಲೆ ರಿಸೈನ್ ಮಾಡು. ಸಿಂಧು ಪಿ.ಯು.ಸಿ ಓದುವಾಗ ನೀನು ಬೆಂಗಳೂರಿನಲ್ಲೇ ಇರಬೇಕು ಎನ್ನುತ್ತಿದ್ದ ಪವನ್.

ಪವನ್ ಎಂಜಿನಿಯರ್. ಒಳ್ಳೆಯ ಸಂಬಳ ಬರುತ್ತಿತ್ತು. ಮನೆ ಕಟ್ಟುವಾಗ ಬೃಂದಾ ಬ್ಯಾಂಕ್‌ನಿಂದ ಸಾಲು ತೆಗೆದುಕೊಂಡಿದ್ದಳು. ಇಬ್ಬರೂ ಸಾಲ ಬೇಗ ತೀರಿಸಿದ್ದರು. ಮೂರು ಬೆಡ್‌ರೂಂ ಮನೆ ವಿಜಯನಗರದಲ್ಲಿತ್ತು. ಬೃಂದಾ ಮಹಾರಾಣಿ ಕಾಲೇಜಿನಲ್ಲಿ ಫಿಸಿಕ್ಸ್ ಲೆಕ್ಚರರ್. ಮಕ್ಕಳಿಬ್ಬರೂ ಪಬ್ಲಿಕ್ ಶಾಲೆಯಲ್ಲಿ ಓದುತ್ತಿದ್ದರು. ಬೃಂದಾಳ ತಂದೆ ತಾಯಿ ಮೈಸೂರಿನಲ್ಲಿದ್ದರು. ಬೃಂದಾಳ ಅಣ್ಣ ಭರತ್ ಬ್ಯಾಂಕ್ ಮ್ಯಾನೇಜರ್. ಅತ್ತಿಗೆ ಮಾಧವಿ ಎಲ್.ಐ.ಸಿ.ಯಲ್ಲಿದ್ದಳು. ಇಬ್ಬರು ಮಕ್ಕಳು. ತಂದೆ ತಾಯಿ ಕೆಳಗಿನ ಮನೆಯಲ್ಲಿದ್ದರು. ಮಹಡಿ ಮೇಲೆ ಭರತ್ ಫ್ಯಾಮಿಲಿ ಇತ್ತು. ಪವನ್ ತಂದೆತಾಯಿ ಮಂಡ್ಯದ ಹತ್ತಿರ ಹಳ್ಳಿಯಲ್ಲಿದ್ದರು. ಇತ್ತೀಚೆಗೆ ಪವನ್ ಅಣ್ಣ ಚೇತನ್ ತಂದೆ ತಾಯಿಯರನ್ನು ಮಂಗಳೂರಿಗೆ ಕರೆದೊಯ್ದಿದ್ದ. ಚೇತನ್ ಅವನ ಹೆಂಡತಿ ಮಂದಾರಾ ಇಬ್ಬರೂ ಡಾಕ್ಟರ್ಸ್. ಮನೆ, ಮಕ್ಕಳನ್ನು ನೋಡಿಕೊಳ್ಳಲು ಅವರಿಗೆ ತಂದೆತಾಯಿಯ ಅಗತ್ಯವಿತ್ತು. ಬೃಂದಾ ಮಕ್ಕಳು ಚಿಕ್ಕವರಿದ್ದಾಗ ಅವಳ ತಾಯಿ ತಂದೆ ಬಂದು ಸಹಾಯ ಮಾಡಿದ್ದರು. ಒಟ್ಟಿನಲ್ಲಿ ಎಲ್ಲಾ ಕುಟುಂಬಗಳ ನಡುವೆ ನಂಬಿಕೆ, ವಿಶ್ವಾಸ, ಸೌಹಾರ್ದತೆ ಇತ್ತು.

ನಾಲ್ಕು ದಿನ ಬಿಟ್ಟು ಬೃಂದಾ ಗೆಳತಿಗೆ ಫೋನ್ ಮಾಡಿದಳು. ಅವಳು ಕಾಲ್ ರಿಸೀವ್ ಮಾಡಲಿಲ್ಲ. ಅವಳು ಪಿ.ಜಿಯಲ್ಲಿದ್ದುದು ಗೊತ್ತಿತ್ತು. ಆದರೆ ಯಾವ ಪಿ.ಜಿ. ಎಂದು ಗೊತ್ತಿರಲಿಲ್ಲ. ಪ್ರತಿಮಾಳ ಫ್ರೆಂಡ್ ರೇಖಾಳ ನಂಬರ್ ಬೃಂದಾಳ ಬಳಿ ಇತ್ತು. ಒಂದು ಸಾಯಂಕಾಲ ಬೃಂದಾ ರೇಖಾಗೆ ಫೋನ್ ಮಾಡಿದಳು.

ನಾನೇ ನಿಮಗೆ ಫೋನ್ ಮಾಡೋಣಾಂತಿದ್ದೆ. ಸುಮಾರು 10–12 ದಿನಗಳಿಂದ ಅವಳು ಒಂದು ತರಹ ಇದ್ದಳು. ಆಮೇಲೆ ಪಿ.ಎಚ್.ಡಿಗೆ ಹೆಸರು ರಿಜಿಸ್ಟ್ರು ಮಾಡಿಸಿದಳು. ಇದ್ದಕ್ಕಿದ್ದಂತೆ ನಮ್ಮ ಕಾಲೇಜ್‌ನ ಬೇರೆ ಬ್ರಾಂಚ್‌ಗೆ ವರ್ಗ ತೆಗೆದುಕೊಂಡಳು. ಪಿ.ಜಿ.ನೂ ಖಾಲಿ ಮಾಡಿದಳು.

ಯಾವ ಬ್ರಾಂಚ್‌ಗೆ ಹೋದಳು?

ಮೈಸೂರಿನಲ್ಲಿ ನಮ್ಮ ಕಾಲೇಜ್ ಬ್ರಾಂಚ್ ಶುರುವಾಗಿದೆ. ಅಲ್ಲಿಗೆ ಹೋದಳು. ಅವಳ ಗೈಡ್ ಅಲ್ಲೇ ಇದ್ದಾರಂತೆ. ಬೃಂದಾ ಗಂಡನಿಗೆ